
ಹಿಂದುಳಿದ ಹೈದ್ರಾಬಾದ್ ಕರ್ನಾಟಕದ (ಈಗಿನ ಕಲ್ಯಾಣ ಕರ್ನಾಟಕದ) ಪ್ರದೇಶವಾಗಿತ್ತು. ಶಿಕ್ಷಣ ನೀಡುವುದೇ ದುಸ್ತರದ ಕೆಲಸವಾಗಿರುವ ಆ ಕಾಲದಲ್ಲಿ ಸಹೃದಯರಾದ ಡಾ. ಬಸವರಾಜ ಪಾಟೀಲ ಸೇಡಂ, ಕೆರಳ್ಳಿ ಗುರುನಾಥರೆಡ್ಡಿ, ಪ್ರಭುರಾಜ ಅರಣಕಲ್ ಮತ್ತು ಸಿದ್ದಪ್ಪ ತಳ್ಳಳ್ಳಿಯವರು ಸೇಡಂನಲ್ಲಿ ಸೃಷ್ಟಿಸಿದ ಸಾಹಿತ್ಯಿಕ ವಾತಾವರಣವೇ ನನ್ನಂಥವರು ಸಾಹಿತ್ಯ ಲೋಕ ಪ್ರವೇಶಿಸಲು ಕಾರಣವಾಯಿತು. ಆ ಹಿರಿಯರೆಲ್ಲ ನನ್ನಲ್ಲಿಯ ಆಸಕ್ತಿಯನ್ನು ಗುರುತಿಸಿ, ನಾನು ಇನ್ನೂ ವಿದ್ಯಾರ್ಥಿಯಾಗಿರುವಾಗಲೇ 1988ರಲ್ಲಿ ನನ್ನ ಮೊಟ್ಟ ಮೊದಲ ಮಕ್ಕಳ ಕವನ ಸಂಕಲನ 'ಚೆಲುವ ಚಂದಿರ'ನನ್ನು 'ನೃಪತುಂಗ ಅಧ್ಯಯನ ಸಂಸ್ಥೆ'ಯ ವತಿಯಿಂದ ಶಾಂತರಸರಂತಹ ಹಿರಿಯ ಸಾಹಿತಿಗಳ ಪುಸ್ತಕದೊಡನೆ ಪ್ರಕಟಿಸಿ ನನ್ನಲ್ಲಿ ಭರವಸೆ ತುಂಬಿದರು. ಹೀಗೆ ನಾನು ಮಕ್ಕಳ ಸಾಹಿತ್ಯದಲ್ಲಿ ಅಂಬೆಗಾಲಿಟ್ಟು ಮುಂದೆ ಸಾಗುವಂತಾಯಿತು.

## 2

ಬಾಲ್ಯವನ್ನು ದೇವರು ಸುಖಪಡಲಿಕ್ಕೆಂದೇ ದಯಪಾಲಿಸಿರುತ್ತಾನೆ ಎಂದು ಅಂದುಕೊಂಡವ ನಾನು. ನಾನು ಸಣ್ಣವನಾಗಿದ್ದಾಗ ಬಹಳ ಮಜವಾದ ಕನಸು ಕಾಣುತ್ತಿದ್ದೆ. ನೋಡುನೋಡುತ್ತಿರುವಂತೆಯೇ ಕನಸಿನಲ್ಲಿ ದೊಡ್ಡವನಾಗಿರುತ್ತಿದ್ದೆ. ಮಧ್ಯರಾತ್ರಿ ಕನಸಿನಲ್ಲಿ ಕನವರಿಸುತ್ತಿದ್ದೆ: 'ಅಯ್ಯೋ ಇಷ್ಟು ಬೇಗ ದೊಡ್ಡವನಾಗಬಾರದಿತ್ತು' ಎಂದು. ನಿಜ ತಿಳಿಯಲು ನನ್ನ ನಾನು ಚಿವುಟಿಕೊಂಡು ಎದ್ದು ನಿಜ ತಿಳಿದಾಗ ಸಂತೋಷವಾಗುತ್ತಿತ್ತು. 'ಅಯ್ಯೋ ದೇವರೇ! ನಾನು ಇದ್ದ ಹಾಗೆ ಇರುವೆನಲ್ಲ. ಹೀಗೆ ಇರಲು ಬಿಡು ಮಹಾರಾಯ' ಎಂದು ಕೈ ಮುಗಿಯುತ್ತಿದ್ದೆ. ಬಹುಶಃ ಸದಾ ನನ್ನ ಮನಸು ನಾನು ಸಣ್ಣವನಾಗಿರಲು ಹವಣಿಸುತ್ತಿತ್ತು. ಈಗೀಗಂತೂ ಆ ಬಾಲ್ಯ ನನಗೆ ಹೆಚ್ಚು ಕಾಡುತ್ತಿದೆ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಅಧ್ಯಾಪಕನಾದ ನಾನು ಎಷ್ಟೋ ಸಲ ಅಂದುಕೊಳ್ಳುತ್ತೇನೆ, 'ಶಾಲಾ ಶಿಕ್ಷಕನಾಗಿದ್ದರೆ ನಾನು ಸದಾ ಪುಟ್ಟ ಮಕ್ಕಳೊಂದಿಗೆ ಬೆರೆತು ಹಾಯಾಗಿರಬಹುದಿತ್ತಲ್ಲ!' ಎಂದು. ಬಹುಶಃ ನನ್ನೊಳಗಿನ ಈ ಅವ್ಯಾಹತ ತುಡಿತವೇ ನನ್ನನ್ನು ಮಕ್ಕಳಿಗಾಗಿ ಬರೆಯಲು ಹಚ್ಚಿರಬಹುದು. ಮಕ್ಕಳಿಗೆ ಮ್ಯಾಗಿ, ಕುರ್‌ಕುರೆ, ಸೋಯಾ ಸ್ಟಿಕ್ಸ್, ಚಾಕ್ಲೇಟ್, ಐಸ್ಕ್ರೀಮ್‌ನಂಥ ತಿಂಡಿ ತಿನಿಸುಗಳು ಇಷ್ಟವಾಗುವಂತೆಯೇ, ಸಾಹಿತ್ಯವೂ ಇಷ್ಟವಾಗಬೇಕಲ್ಲವೇ? ಅಂಥ ಸಾಹಿತ್ಯ ಮಕ್ಕಳಿಗೆ ಸಿಕ್ಕಬೇಕು ಎನ್ನುವ ಅದಮ್ಯ ಬಯಕೆಯೂ ಒಂದು ಕಾರಣವಾಗಿರಬಹುದು.

## 3

ಖಂಡಿತ ಹೌದು. ಇದಕ್ಕೆ ಮೂಲ ಕಾರಣ ಈಗಿನ ಮಕ್ಕಳ ಮೇಲಿರುವ ಶೈಕ್ಷಣಿಕ ಒತ್ತಡ ಮತ್ತು ಶಿಕ್ಷಣದ ಪದ್ಧತಿ. ಮಕ್ಕಳು ಈ ಕಥೆ–ಕವಿತೆಗಳನ್ನು ಹಚ್ಚಿಕೊಳ್ಳುವಲ್ಲಿ ಅಥವಾ ಅವುಗಳ ಉಸಾಬರಿಯಿಂದ ಅವರನ್ನು ದೂರ ಮಾಡುವಲ್ಲಿ ಶಿಕ್ಷಕರ, ಪಾಲಕರ ಮತ್ತು ಸಮಾಜದ ಪಾತ್ರವೂ ಅಡಗಿದೆ. ನಾನಿಲ್ಲಿ



ಮಕ್ಕಳಿಗಾಗಿ ಬರೆಯುವುದರಲ್ಲಿ ಖುಷಿ ಹಾಗೂ ಸಾರ್ಥಕತೆಯನ್ನು ಕಾಣುತ್ತಿರುವ ರಾಜಶೇಖರ ಕುಕ್ಕುಂದಾ, ಬಾಗಲಕೋಟೆಯ ಬಸವೇಶ್ವರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಂಯೋಜಿತ ಪ್ರಾಧ್ಯಾಪಕರು. 'ಚೆಲುವ ಚಂದಿರ', 'ಗೋಲಗುಮ್ಮಟ', 'ಪುಟಾಣಿ ಪ್ರಾಸಗಳು' ಅವರ ಪ್ರಸಿದ್ಧ ಮಕ್ಕಳ ಕವನ ಸಂಕಲನಗಳು. ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ಕೂಡ ಬರವಣಿಗೆ ಮಾಡಿದ್ದಾರೆ. ಪ್ರಜಾವಾಣಿ ದೀಪಾವಳಿ ಮಕ್ಕಳ ಕಾವ್ಯಸ್ಪರ್ಧೆಯಲ್ಲಿ ಬಹುಮಾನಿತರು. 'ನಾ. ಡಿಸೋಜಾ ಪುರಸ್ಕಾರ' ಹಾಗೂ 'ಅಮ್ಮ' ಪುರಸ್ಕಾರಗಳು ರಾಜಶೇಖರ ಅವರ ಮಕ್ಕಳ ಸಾಹಿತ್ಯ ಕೃಷಿಗೆ ಸಂದಿವೆ.